ಮೇಲೆ ಕಣ್ಣು ಮುಚ್ಚಿಕೊಂಡು ಕುಳಿತುಕೋ, ಅದು ನಿನ್ನ ಬಳಿ ಬರುತ್ತದೆ' ಎಂದೆ. '**Don't joke**' ಎಂದಳು. '**try**' ಎಂದೆ. '**alright**' ಎಂದು ಅಲ್ಲೇ ಇದ್ದ ಸಣ್ಣ ಬಂಡೆಯ ಮೇಲೆ ಹೋಗಿ ಕಣ್ಣು ಮುಚ್ಚಿ ಕುಳಿತಳು. ಐದತ್ತು ನಿಮಿಷಗಳಾದವು. ನಾನು ನೋಡುತ್ತಿರುವಾಗಲೇ ಒಂದು ಚಿಟ್ಟೆ ಅವಳ ಬಳಿ ಹೋಗಿ ನಿಧಾನವಾಗಿ ಒಂದು ಸುತ್ತು ಸುತ್ತಿ, ಅವಳ ಕೈ ಮೇಲೆ ಕುಳಿತಿತು. ಅದರ ಮೃದು ಸ್ಪರ್ಶವನ್ನು ಅವಳ ನುಣ್ಣನೆಯ ಚರ್ಮ ಅವಳಿಗೆ ಹೇಳಿರಬೇಕು, ಮೆಲ್ಲಗೆ ಕಣ್ಣು ತೆರೆದು ಓರೆಗಣ್ಣಲ್ಲಿ ಚಿಟ್ಟೆಯನ್ನು ನೋಡಿದಳು.

ಅವಳ ಕಣ್ಣಂತೆ ಆ ಚಿಟ್ಟೆ ನೀಲಿ. ಅಂಚಿನ ಸುತ್ತ ಇದ್ದ ಕಪ್ಪು ಗೆರೆಗಳು ಅವಳ ರೆಪ್ಪೆಯಂತೆ ಕಂಡವು. ಓರೆಗಣ್ಣಲ್ಲಿ ಚಿಟ್ಟೆಯನ್ನು ನೋಡುತ್ತ, ಮುಗುಳ್ನಗುತ್ತ ಕದಲದೆ ಕುಳಿತಿದ್ದಳು. ಚಿಟ್ಟೆ ಸ್ವಲ್ಪ ಸಮಯ ಕುಳಿತಿದ್ದು ಮೆಲ್ಲಗೆ ಎದ್ದು ಹಾರಿ ಹೋಯಿತು. ಅವಳು ವಾವ್... ಎನ್ನುತ್ತ ಎದ್ದು ಓಡಿಬಂದು ನನ್ನನ್ನು ಬಿಗಿಯಾಗಿ ಅಪ್ಪಿಕೊಂಡಳು. 'ಹೀಗೊಂದು ಜೆನ್ ಕಥೆ ಇರುವುದು ನನಗೆ ಗೊತ್ತೇ ಇಲ್ಲ' ಎಂದಳು. ನಾನೋ ಕಾಡಿನ ಅಪ್ಪುಗೆಯಲ್ಲಿ ಕಳೆದುಹೋಗಿದ್ದೆ.

★★★

ಸಿಂಗಪುರದ ಸೀಮೆ ಬಡಾವಣೆಯಿಂದ ವುಡ್‌ಲೆಂಡ್ಸ್ ಬಡಾವಣೆಯಲ್ಲಿರುವ ರೈಲು ನಿಲ್ದಾಣವನ್ನು ಕಾರಿನಲ್ಲಿ ತಲುಪಲು ಸಂಜೆಯ 'ರಶ್ ಅವರ್'ನಲ್ಲಿ ಸುಮಾರು ಗಂಟೆಗಳೇ ಬೇಕು. ಸಂಜೆ ಏಳು ಗಂಟೆಗೆ ಮಲೇಶಿಯಾದ ಜೆರಾಂತುತ್ ಎಂಬ ಚಿಕ್ಕ ಊರನ್ನು ಹಾದು ಹೋಗುವ ರೈಲನ್ನು ಹಿಡಿಯಲು ಹೊರಟಿದ್ದೆ. ವುಡ್‌ಲೆಂಡ್ಸ್ ರೈಲು ನಿಲ್ದಾಣವನ್ನು ಬಂದು ತಲುಪಿದಾಗ ರೈಲು ಹೊರಡಲು ಹತ್ತು ನಿಮಿಷಗಳು ಮಾತ್ರ ಉಳಿದಿದ್ದವು. ಸಿಂಗಪುರದ ಎಮಿಗ್ರೇಷನ್ ಮತ್ತು ಮಲೇಶಿಯಾದ ಇಮಿಗ್ರೇಷನ್ ತಪಾಸಣೆಗಳನ್ನು ಮುಗಿಸಿ, ಏದುಸಿರು ಬಿಡುತ್ತಾ, ಸೂಟ್‌ಕೇಸನ್ನು ಎಳೆದುಕೊಂಡು ಓಡುತ್ತಾ ಗಡಿಬಿಡಿಯಲ್ಲಿ ನನ್ನ ಕಂಪಾರ್ಟ್‌ಮೆಂಟನ್ನು ಹುಡುಕಿ ಹತ್ತುವುದಕ್ಕೂ, ರೈಲು ಹೊರಡುವುದಕ್ಕೂ ಸರಿಯಾಗಿತ್ತು. ತಡವಾಗಿದ್ದರೆ... ಆ ಆತಂಕದಲ್ಲೇ ಬೆವರನ್ನು ಒರಸಿಕೊಳ್ಳುತ್ತ, ಬಾಟಲಿ ತೆಗೆದು ನೀರು ಕುಡಿದೆ.

ಏಳು ಗಂಟೆಗಳ ಪ್ರಯಾಣದನಂತರ ಬೆಳಗಿನ ಜಾವ 2.15ಕ್ಕೆ ಜೆರಾಂತುತ್ ತಲುಪಿ, ಮತ್ತೆ ಎರಡೇ ನಿಮಿಷದಲ್ಲಿ ರೈಲು ಮುಂದೆ ಹೊರಡುತ್ತದೆ. ಬೇಯಿಸಿದ ತರಕಾರಿಗೆ ಸ್ವಲ್ಪ ಉಪ್ಪು, ಮೆಣಸು, ಟೊಮೆಟೊ ಕೆಚ್ಚಪ್ ಬೆರಸಿ ಚಪಾತಿಯಲ್ಲಿ ಸುರುಳಿ ಸುತ್ತಿ ತಂದಿದ್ದನ್ನು ಬಿಯರ್ ಕ್ಯಾನ್ ಜತೆ ಸವಿಯುತ್ತ ಹಸಿವು ತಣಿಸಿಕೊಂಡೆ. ತಮನ್ ನೆಗಾರದ ರೈನ್ ಫಾರೆಸ್ಟ್‌ಗೆ ರಜೆ ಕಳೆಯಲು ಮೂರು ದಿನ ಬಂದಿದ್ದೆ. ಎಷ್ಟು ವರ್ಷಗಳ ಕನಸು ಈಗ ಈಡೇರುತ್ತಿದೆ. ಅಲ್ಲಿಯ ದಟ್ಟ ಕಾಡುಗಳು, ತೆಂಬೆಲಿಂಗ್ ನದಿಯ ಮೇಲೆ ಜೆಟ್ಟಿ ಬೋಟಿನಲ್ಲಿ ಪ್ರಯಾಣ, ಇವೆಲ್ಲ ನಿಜವಾಗಲಿದೆ. ಕನಸುಗಳಿಗೆ ಬಹಳ ಶಕ್ತಿ ಇರುತ್ತದಂತೆ, ತೀವ್ರವಾಗಿ ಬಯಸಿದರೆ ಅದನ್ನು ದೊರಕಿಸಿಕೊಡಲು ನಮಗೆ ನೆರವಾಗಿಯೇ ಕೆಲಸಮಾಡುತ್ತದಂತೆ. ಮೊಬೈಲ್ ಫೋನಿನಲ್ಲಿ ಬೆಳಗಿನ ಜಾವ 1.45ಕ್ಕೆ ಅಲಾರಾಂ ಇಟ್ಟು ಮಲಗಿದೆ. ಏಸಿ ಕೋಚ್, ಮೆತ್ತನೆಯ ಫೋಮ್ ಹಾಸಿಗೆ, ಹೊದೆಯಲು ಕಂಬಳಿ, ಮಂದ ಬೆಳಕು. ತೊಟ್ಟಿಲು ತೂಗಿದಂತೆ ರೈಲಿನ ಓಟ, ಲಾಲಿಯಂತೆ ರೈಲಿನ ಡಗಡಗ ಡಗ, ಕೂ... ಯಾವಾಗ ಕಣ್ಣು ಸೆಳೆಯಿತೋ ತಿಳಿಯಲಿಲ್ಲ.

ತಟ್ಟಿ ಯಾರೋ ಎಬ್ಬಿಸಿದಾಗ ಬೆಚ್ಚಿ ಕಣ್ಣು ತೆರೆದೆ. ಟಿಟಿ 'ಗುಡ್ ಮಾರ್ನಿಂಗ್, ನಿಮ್ಮ ಸ್ಟೇಷನ್ ಇನ್ನು ಹದಿನೈದು ನಿಮಿಷದಲ್ಲಿ ಬರುತ್ತದೆ, ದಯವಿಟ್ಟು ಏಳಿ' ಎಂದು ವಿನಯದಿಂದ ಎಚ್ಚರಿಸಿದ. ಮೊಬೈಲ್ ನೋಡಿದರೆ ಗಂಟೆ ಎರಡು. 1.45ಕ್ಕೆ ಇಟ್ಟಿದ್ದ ಅಲಾರಾಂ ಸಹ ಕಿವಿಗೆ ಬೀಳದಂತಹ